





ಉದ್ದನೆಯ ಸರೋವರ. ಈ ಸರೋವರದ ಪೂರ್ವ ಹಾಗೂ ಉತ್ತರದ ಉದ್ದಕ್ಕೂ ಮಂಜಿನಿಂದ ಅವೃತ್ತವಾದ ಪರ್ವತಶ್ರೇಣಿಯಿದೆ. ಮಂಜಿನ ಟೋಪಿ ಹೊದ್ದ ಪರ್ವತ ಸ್ತೋಮ ನಮ್ಮ ಕಾಶ್ಮೀರ , ಬದರಿ, ಗ್ಯಾಂಗ್ಟಕ್‌ಗಳನ್ನು ನೆನಪಿಸುತ್ತದೆ. ಇಲ್ಲಿನ ಫಿಶಿಂಗ್ ಬ್ರಿಡ್ಜ್, ಮ್ಯೂಸಿಯಮ್ ಮತ್ತು ಲೇಕ್ ವಿಲೇಜ್ ದೃಶ್ಯಗಳು ಬಹುಕಾಲ ನೆನಪಿನಲ್ಲಿ ಉಳಿಯುತ್ತವೆ.

**ನೊರ್ರಿಸ್ ಗೇಸರ್ ಬೇಸಿನ್:** ಪ್ರಮುಖ ವರ್ಣರಂಜಿತ ಬಿಸಿನೀರಿನ ಬುಗ್ಗೆಯಿದು. ಹಲವು ಮೈಲುಗಳ ಹಲಗೆ ಹಾಸು ಮಾರ್ಗದಲ್ಲಿ ಹಾಗೆ ಸುಮ್ಮನೆ ಹೋಗುತ್ತಿದ್ದರೆ ಚಿತ್ರ ವಿಚಿತ್ರ ಬಣ್ಣಗಳ ರಂಗೋಲಿಗಳನ್ನು ಕಣ್ತುಂಬಿಕೊಳ್ಳಬಹುದು. ನಿರಂತರ ಬುಗ್ಗೆಯ ಲಾವಾದ ಉಷ್ಣತೆಯಿಂದ ಪಿಂಗಾಣಿ, ಚೀನಿ ಮಣ್ಣ ಪಾತ್ರೆಯ ಬಣ್ಣದಂತಹ ಭೂ ಪದರಗಳಾಗಿವೆ. ಆಗಾಗ್ಗೆ ನಡೆಯುವ ಚಿಕ್ಕ ಚಿಕ್ಕ ಭೂಕಂಪನಗಳಿಂದಾಗಿ ನೊರ್ರಿಸ್ ಬೇಸಿನ್ ಬಹಳಷ್ಟು ಹಾನಿಗೊಳಗಾಗಿದೆ. ನ್ಯಾಷನಲ್ ಪಾರ್ಕಿನ ಮಧ್ಯೆಭಾಗದಲ್ಲಿರುವ ಈ ಬೇಸಿನ್ ತನ್ನ ರೂಪವನ್ನು ಪದೇ ಪದೇ ಬದಲಿಸಿಕೊಳ್ಳುತ್ತಲೇ ಇರುತ್ತದೆ.

ಲಾಮರ್ ವ್ಯಾಲಿ ಎಂಬ ವಿಶಾಲ ಕಣಿವೆಯಲ್ಲಿ ಹೇರಳವಾಗಿ ಕಾಡುಕೋಣ, ಕರಡಿ, ತೋಳ, ಶಂಬರ, ಕಡವಗಳು ಕಾಣಸಿಗುತ್ತವೆ. ಈ ಕಣಿವೆಯಲ್ಲಿ ಮೀನುಗಾರಿಕೆಗೂ ಆಸ್ಪದವಿದೆ.

**ಟವರ್ ಫಾಲ್ಸ್:** ಪ್ರಸಿದ್ಧ ಜಲಪಾತ. ರೂಸೆವೆಲ್ಟ್ ಹೆಬ್ಬಾಗಿಲಿನಿಂದ 2 ಮೈಲು ದೂರಕ್ಕೆ 132 ಅಡಿಗಳ ಎತ್ತರದಿಂದ ಧುಮ್ಮಿಕ್ಕುವ ಈ ಜಲಪಾತ ಅತಿ ಮೋಹಕ . ಎರಡು ಹಂತಗಳಲ್ಲಿ ಧುಮುಕುವ ಜಲಪಾತದ ತಳ ಭಾಗವು ಬಹಳ ಕಡಿದಾಗಿದ್ದು ಮಳೆಗಾಲದಲ್ಲಿ ಜಾರುವ ಅಪಾಯವಿದೆ.

**ಲೋಯರ್ ಗೇಸರ್ ಬೇಸಿನ್:** ಅಪ್ಪರ್ ಬೇಸಿನ್ ಒಂದು ಚದರ ಮೈಲಿಯ ಹರವಿದ್ದರೆ, ಲೋಯರ್ ಬೇಸಿನ್ 11 ಚದರ ಮೈಲಿಗಳಷ್ಟು ವಿಸ್ತಾರವಾಗಿದೆ. ಥರ್ಮಲ್ ಉಷ್ಣತೆಯ ಹೊಗೆ ತುಂಬಿದ ಉಗಿ ವಿರಳವಾಗಿ ಹಬ್ಬಿದ್ದು, ಅದರಿಂದ ಕೆಸರುಗುಂಡಿ ಮತ್ತು ಕೆಸರುಕುಡಿಕೆಗಳು ನಿರ್ಮಾಣವಾಗಿದೆ. ನೇರವಾದ, ನೆಟ್ಟಗಿರುವ ಚಿಲುಮೆಗಳಿಂದ ಉಂಟಾಗುವ ಸುಂದರವಾದ ಬಿಸಿಯ ಕೊಳಗಳ ವರ್ಣ ನಿರ್ಮಾಣ ನೋಡುವುದು ಅನುಪಮ ಅನುಭವ.

ವೆಸ್ಟ್ ತುಮ್ ಗೇಸರ್ ಬೇಸಿನ್‌ನಲ್ಲಿ ಥರ್ಮಲ್ ನಿರೀಂದ್ರಿಯ ದ್ರವ್ಯದ ವಿವಿಧ ರೂಪಗಳು ಕಾಣಸಿಗುತ್ತವೆ. ಇಲ್ಲಿಂದ ಸರೋವರದ ವಿಹಂಗಮ ನೋಟವನ್ನು ಕಣ್ಣ ತುಂಬಿಸಿ ಕೊಳ್ಳಬಹುದು.

ಯೆಲ್ಲೋ ಸ್ಟೋನ್ ನ್ಯಾಷನಲ್ ಪಾರ್ಕಿನ ವರ್ಣರಂಜಿತ ಬಿಸಿನೀರ ಬುಗ್ಗೆಗಳನ್ನು ಎಷ್ಟು ವರ್ಣಿಸಿದರೂ ಸಾಲದು. ಕೈ ಬೀಸಿ ಕರೆಯುವ ಪರ್ವತ ಸಾಲುಗಳು, ಯಾರದೇ ಭಯವಿಲ್ಲದೆ ನಮ್ಮ ಸುತ್ತ ಮುತ್ತ ತಿರುಗಾಡುವ ಪ್ರಾಣಿಗಳನ್ನು ನೋಡುತ್ತಾ ಕಾಲ ಕಳೆದದ್ದೇ ಗೊತ್ತಾಗುವುದಿಲ್ಲ. ಅದ್ಭುತ ಮನರಂಜನೆ ಮತ್ತು ಪ್ರಕೃತಿಯ ವಿಸ್ಮಯ ನೋಟಗಳನ್ನು ವರ್ಣಿಸಲು ಪದಗಳು ಸಿಗುವುದಿಲ್ಲ.